# 1 ನೇ ಹೆಚ್ಚುವರಿ  ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ  951/2023

ಪಿರ್ಯಾದುದಾರರು  ಃ  ಶ್ರೀ.ಎನ್ ರಮೇಶ್ ರಾವ್
ಬಿನ್ ಎನ್.ವೈ.ನಾರಾಯಣರಾವ್, 53 ವರ್ಷ,
ವಾಸ ಃ ಹಳೇ ವಾಟರ್ ಟ್ಯಾಂಕ್ ರಸ್ತೆ,
9 ನೇ ತಿರುವು, ಲೀಲಾವತಿ ಬಡಾವಣೆ,
ಮದ್ದೂರು ಟೌನ್ ಮತ್ತು ತಾಲ್ಲೂಕು,
ಮಂಡ್ಯ ಜಿಲ್ಲೆ.

**ವಿರುದ್ಧ**

**ಆರೋಪಿ  -  ಃ  ಶ್ರೀ.ಹೆಚ್.ಎಲ್.ಯೋಗೇಶ್**
**ಬಿನ್ ಲಿಂಗಪ್ಪ, 52 ವರ್ಷ,**
**ಅಂಕನಾಥೇಶ್ವರ ಬಸ್ ಮಾಲೀಕರು,**
ವಾಸ ಃ ಹಳ್ಳಿಕೆರೆ ಗ್ರಾಮ, ಕೆ.ಹೊನ್ನಲಗೆರೆ ಅಂಚೆ,
ಕಸಬಾ ಹೋಬಳಿ, ಮದ್ದೂರು ತಾಲ್ಲೂಕು,
ಮಂಡ್ಯ ಜಿಲ್ಲೆ.

**ಆಪಾದನೆ**

ಈ ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದಿಯವರಿಂದ ಕಾನೂನು ಬದ್ದ ಅವಶ್ಯಕತೆಗಾಗಿ ದಿನಾಂಕಃ25.01.2023 ರಂದು ರೂ.4,00,000/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಹಣವನ್ನು ಎರಡು ತಿಂಗಳ ಒಳಗಾಗಿ ಮರು ಪಾವತಿ ಮಾಡುವುದಾಗಿ ಒಪ್ಪಿಕೊಂಡಿದ್ದು, ಮರು ಪಾವತಿಗಾಗಿ ನಿಮ್ಮ ಕೆನರಾ ಬ್ಯಾಂಕ್, ಮದ್ದೂರು ಶಾಖೆಯ ಚೆಕ್ ಸಂಖ್ಯೆ 199690 ಮೊತ್ತ 4,00,000/- ಹಣವನ್ನು ನಮೂದಿಸಿದ್ದು ದಿನಾಂಕಃ30.03.2023 ರಂದು ಬ್ಯಾಂಕಿನಿಂದ ಪಡೆದುಕೊಳ್ಳುವಂತೆ ಪಿರ್ಯಾದಿಗೆ ನೀಡಿದ್ದು, ಸದರಿ ಚೆಕ್ ಅನ್ನು ನಗದೀಕರಿಸಲು ಪಿರ್ಯಾದಿಯು ಕರ್ನಾಟಕ ಗ್ರಾಮೀಣ ಬ್ಯಾಂಕ್, ಮದ್ದೂರು

ಶಾಖೆಗೆ ಹಾಜರು ಪಡಿಸಿದಾಗ ಸದರಿ ಬ್ಯಾಂಕ್ ನವರು " **Funds Insufficient** " ಎಂಬ ಹಿಂಬರಹದೊಂದಿಗೆ ದಿನಾಂಕ 31.03.2023 ರಂದು ಸದರಿ ಚೆಕ್ ಅಮಾನ್ಯ ಮಾಡಿದ್ದು, ಆ ಸಂಬಂಧ ಪಿರ್ಯಾದಿಯು ದಿನಾಂಕಃ21.04.2023 ರಂದು ನಿಮಗೆ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕಃ 22.04.2023 ರಂದು ಖುದ್ದು ಜಾರಿಯಾಗಿದ್ದರೂ ಸಹ ನೀವು ಇದುವರೆವಿಗೂ ಹಣವನ್ನು ಪಾವತಿ ಮಾಡಿರುವುದಿಲ್ಲ. ಆ ಮೂಲಕ ಲಿಖಿತ ವರ್ಗಾವಣೆಗಳ ಅಧಿನಿಯಮ ಕಲಂ-138 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುವುದಾಗಿ ನಿಮ್ಮ ವಿರುದ್ದ ಆರೋಪಿಸಲಾಗಿದೆ.

ಪ್ರಶ್ನೆ-1 ಃ ಈ ಮೇಲೆ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ ?

ಆರೋಪಿ ಉತ್ತರ ಃ

ಪ್ರಶ್ನೆ-2 ಃ ನೀವು ಆಪಾದನೆಯನ್ನು ಒಪ್ಪುಕೊಳ್ಳುತ್ತೀರಾ ಅಥವಾ ಏನಾದರೂ ಹೇಳುವುದಿದೇಯಾ?

ಆರೋಪಿ ಉತ್ತರ ಃ

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 07.08.2024 ರಂದು ಸಹಿ ಮಾಡಿರುತ್ತಾರೆ)

(ನಳಿನ ಎಸ್.ಸಿ.)
1 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿ
ಮತ್ತು ಜೆಎಂಎಫ್‌ಸಿ ನ್ಯಾಯಾಲಯ,

**ಆರೋಪಿ ಸಹಿ ಃ**